# ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯ, ರಾಯಚೂರು

**ದಿನಾಂಕ: 19.05.2026** ರಂದು ಮಂಗಳವಾರ ಬೆಳಗ್ಗೆ **11.00** ಗಂಟೆಗೆ ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯದ ಸಭಾಂಗಣದಲ್ಲಿ ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ನಡೆದ ವಿದ್ಯಾವಿಷಯಕ ಪರಿಷತ್ ಸಾಮಾನ್ಯ ಸಭೆಯ ನಡಾವಳಿಗಳು.

**ಸಭೆಯಲ್ಲಿ ಉಪಸ್ಥಿತರಿದ್ದ ಅಧಿಕಾರಿಗಳು/ಸದಸ್ಯರು**

1. ಪ್ರೊ. ಶಿವಾನಂದ ಕೆಳಗಿನಮನಿ : ಅಧ್ಯಕ್ಷರು
2. ಪ್ರೊ. ಪಾರ್ವತಿ ಸಿ. ಎಸ್, (ಡೀನರು) : ಸದಸ್ಯರು
3. ಪ್ರೊ. ಪಿ. ಭಾಸ್ಕರ್, (ಡೀನರು) : ಸದಸ್ಯರು
4. ಡಾ. ಲತಾ ಎಂ.ಎಸ್, (ಡೀನರು) : ಸದಸ್ಯರು
5. ಡಾ. ವೆಂಕಟೇಶ ಕೆ, (ಡೀನರು) : ಸದಸ್ಯರು
6. ಶ್ರೀ ಥಾಮಸ್ ಬೆಂಜಮಿನ್ : ಸದಸ್ಯರು
7. ಶ್ರೀ ಸುಶೀಲ್ ಕುಮಾರ್ ತಂದೆ ಮಲ್ಲಯ್ಯ : ಸದಸ್ಯರು
8. ಶ್ರೀ ಚಂದ್ರಶೇಖರಗೌಡ ಬಿನ್ ಸಿದ್ದನಗೌಡ ಪೋ ಪಾಟೀಲ್ : ಸದಸ್ಯರು
9. ಶ್ರೀ ರಮೇಶ ತಂದೆ ಸತ್ಯಪ್ಪ : ಸದಸ್ಯರು
10. ಡಾ. ಯಂಕಣ್ಣ : ಸದಸ್ಯರು
11. ಡಾ. ಸಿದ್ದಪ್ಪ : ಸದಸ್ಯರು
12. ಶ್ರೀ. ಪರ್ವತರೆಡ್ಡಿ : ಸದಸ್ಯರು
13. ಡಾ. ಚನ್ನಬಸಪ್ಪ ಮೇಟಿ : ಸದಸ್ಯರು
14. ಡಾ. ಈರಣ್ಣ. ಪೂಜಾರಿ : ಸದಸ್ಯರು
15. ಶ್ರೀ. ಸತ್ಯನಾರಾಯಣ ಶ್ರೇಷ್ಠಿ : ಸದಸ್ಯರು
16. ಡಾ. ಈರಣ್ಣ. ಜೆ : ಸದಸ್ಯರು
17. ಶ್ರೀ. ಶೇಖಪ್ಪ. ಬಿ. ರ್‍ಯಾಖಾ : ಸದಸ್ಯರು
18. ಡಾ. ಜಿ.ಎಸ್.ಬಿರಾದಾರ, ಗ್ರಂಥಪಾಲಕರು : ಸದಸ್ಯರು
19. ಡಾ. ಸುಯಮೀಂದ್ರ ಕುಲಕರ್ಣಿ, ಹಣಕಾಸು ಅಧಿಕಾರಿಗಳು : ಸದಸ್ಯರು
20. ಪ್ರೊ. ಜ್ಯೋತಿ ದಮ್ಮ ಪ್ರಕಾಶ್, ಕುಲಸಚಿವರು (ಮೌಲ್ಯಮಾಪನ) : ಸದಸ್ಯರು
21. ಡಾ. ಎ. ಚನ್ನಪ್ಪ ಕೆ.ಎ.ಎಸ್. ಕುಲಸಚಿವರು : ಸದಸ್ಯ ಕಾರ್ಯದರ್ಶಿಗಳು

ಕುಲಸಚಿವರು ಹಾಜರಿದ್ದ ಎಲ್ಲಾ ಸದಸ್ಯರನ್ನು ಸ್ವಾಗತಿಸುತ್ತ ಸಭಾಧ್ಯಕ್ಷರ ಅನುಮತಿಯೊಂದಿಗೆ ಈ ಕೆಳಗಿನ ವಿಷಯಗಳನ್ನು ಚರ್ಚಿಸಿದರು.

**ವಿಷಯ ಕ್ರಮಾಂಕ (1) :**

ದಿನಾಂಕ 18.12.2025ರಂದು ನಡೆದ ವಿದ್ಯಾವಿಷಯಕ ಪರಿಷತ್ ವಿಶೇಷ ಸಭೆಯ ಅನುಪಾಲನಾ ವರದಿ ಕುರಿತು

**ನಿರ್ಣಯ:**

ಈ ವಿಷಯ ಕುರಿತು ವಿಶ್ವವಿದ್ಯಾಲಯವು ಕೈಗೊಂಡ ಕ್ರಮಗಳನ್ನು ಚರ್ಚಿಸಿ ಸಭೆಯು ದೃಢೀಕರಿಸಲಾಯಿತು.

**ವಿಷಯ ಕ್ರಮಾಂಕ (2) :**

ದಿನಾಂಕ 22.01.2026ರಂದು ನಡೆದ ವಿದ್ಯಾವಿಷಯಕ ಪರಿಷತ್ ವಿಶೇಷ ಸಭೆಯ ನಡವಳಿಗಳನ್ನು ದೃಢೀಕರಿಸುವ ಕುರಿತು.

**ಚರ್ಚೆ:**

NEP to SEP ಪರಿವರ್ತಿಸಲು ಸಲಹೆ ಕೇಳಿ ಸರ್ಕಾರಕ್ಕೆ ಮನವಿ ಪತ್ರ ಬರೆಯಲು ಚರ್ಚಿಸಲಾಯಿತು ಹಾಗೂ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ NEP ವಿದ್ಯಾರ್ಥಿಗಳಿಗೆ NEP ಯನ್ನು ಮುಂದುವರೆಸಲು ಸಭೆಯ ಸದಸ್ಯರಾದ ಶ್ರೀ ಥಾಮಸ್ ಬೇಂಜಮಿನ್ ಸಭೆಗೆ ತಿಳಿಸಿದರು. ಅಧ್ಯಯನ ಮಂಡಳಿಯ(BOS) ಸಭೆಯಲ್ಲಿ ಪಠ್ಯಕ್ರಮವನ್ನು ರಚಿಸವಾಗ ಬೇರೆ ವಿಶ್ವವಿದ್ಯಾಲಯದ ಪಠ್ಯಕ್ರಮವನ್ನು ಮಾಹಿತಿಗಾಗಿ ಪರಿಶೀಲಿಸಿ ನಮ್ಮ ವಿಶ್ವವಿದ್ಯಾಲಯ ಪಠ್ಯಕ್ರಮವನ್ನು ರಚಿಸಲು ಚರ್ಚಿಸಲಾಯಿತು. ಪಠ್ಯಕ್ರಮ ಗೊಂದಲ ನಿವಾರಿಸಲು ನಿಕಾಯವಾರು ಕಾರ್ಯಗಾರವನ್ನು(Workshop) ಏರ್ಪಡಿಸಲು ಮಾನ್ಯ ಕುಲಸಚಿವರು (ಮೌಲ್ಯಮಾಪನ) ಸಭೆಗೆ ತಿಳಿಸಿದರು.

**ನಿರ್ಣಯ:**

ಮೇಲಿನ ವಿಷಯವನ್ನು ಚರ್ಚಿಸಿ ದಿನಾಂಕ 22.01.2026ರಂದು ನಡೆದ ವಿದ್ಯಾವಿಷಯಕ ಪರಿಷತ್ ವಿಶೇಷ ಸಭೆಯ ನಡವಳಿಗಳನ್ನು ದೃಢೀಕರಿಸಲಾಯಿತು.

**ವಿಷಯ ಕ್ರಮಾಂಕ (3):**
ದಿನಾಂಕ 02.05.2026ರಂದು ನಡೆದ ಹಣಕಾಸು ಸಭೆಯ ನಡವಳಿಗಳನ್ನು ದೃಢೀಕರಿಸುವ ಕುರಿತು:

**ಚರ್ಚೆ:**

ದಿನಾಂಕ 02.05.2026 ರಂದು ಶನಿವಾರ 12:30 ಗಂಟೆಗೆ Hybrid mode ಮುಖಾಂತರ ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯದ ಆಡಳಿತ ಕಛೇರಿಯಲ್ಲಿ ನಡೆದ 2026-27 ನೇ ಆರ್ಥಿಕ ಸಾಲಿನ ಪ್ರಥಮ ಹಣಕಾಸು ಸಮಿತಿಯಲ್ಲಿ ಮಾನ್ಯ ಅಧ್ಯಕ್ಷರು ಹಾಗೂ ಎಲ್ಲಾ ಹಣಕಾಸು ಸಮಿತಿಯ ಸದಸ್ಯರು ವಿಶ್ವವಿದ್ಯಾಲಯವು ಸಿದ್ದಪಡಿಸಿ ಸಲ್ಲಿಸಿದ ವಾರ್ಷಿಕ ಲೆಕ್ಕಪತ್ರಗಳಲ್ಲಿ 2025-26ನೇ ಸಾಲಿನ ಆದಾಯ ಮತ್ತು ವೆಚ್ಚಗಳನ್ನು ಪರಿಶೀಲಿಸಿ ಸಭೆ ಅನುಮೋದಿಸಿತು. ತದನಂತರ 2026-27ನೇ ಸಾಲಿನ ಆಯವ್ಯಯವನ್ನು ಈ ಕೆಳಗಿನಂತೆ ಮಂಡಿಸಲಾಯಿತು.

| ಕ್ರಸಂ: | ವಿವರ | ಸ್ವೀಕೃತಿ ರೂ.ಗಳು ಲಕ್ಷಗಳಲ್ಲಿ | ಪಾವತಿ ರೂ.ಗಳು ಲಕ್ಷಗಳಲ್ಲಿ |
|---|---|---|---|
| ಭಾಗ-1 | ಸರ್ಕಾರದ ಅನುದಾನಗಳು | 413.89 | 413.89 |
| ಭಾಗ-2 | ವಿಶ್ವವಿದ್ಯಾನಿಲಯದ ಸ್ವೀಕೃತಿಗಳು | 3474.10 | 4209.00 |
| ಭಾಗ-3 | ಕೆ.ಕೆ.ಆರ್.ಡಿ.ಬಿ. | 1316.00 | 1316.00 |
| ಭಾಗ-4 | ಋಣಶೀರ್ಷಿಕೆ | 10.00 | 10.00 |
| | ಒಟ್ಟು | **5213.99** | **5948.89** |

**ನಿರ್ಣಯ:**

ಈ ವಿಷಯ ಕುರಿತು ಸಭೆಯಲ್ಲಿ ಕೆಲವು ಸದಸ್ಯರು ವಿಶ್ವವಿದ್ಯಾಲಯದ ತಾತ್ಕಾಲಿಕ/ ಹೊರಗುತ್ತಿಗೆ/ ಸಮಯಾಧಾರಿತ ವೆಚ್ಚಗಳು ಹೆಚ್ಚಾಗಿದ್ದು ಮುಂದಿನ ದಿನಗಳಲ್ಲಿ ವಿಶ್ವವಿದ್ಯಾನಿಲಯದ ಆದಾಯಕ್ಕೆ ಅನುಗುಣವಾಗಿ ಮರುಪರಿಶೀಲಿಸುವ ಕುರಿತು ಚರ್ಚಿಸಿ ಹಣಕಾಸು ಸಮಿತಿಯ ನಡಾವಳಿಗಳನ್ನು ಅನುಮೋದಿಸಿತು.

**ವಿಷಯ ಕ್ರಮಾಂಕ (4) :**

BCA, MCA, MBA ಹಾಗೂ Master of hotel Management and Catering(MHMC) ಕೋರ್ಸ್‌ಗಳನ್ನು AICTE ನಿಂದ ಅನುಮೋದನೆಗೊಂಡ ಕುರಿತು.

**ಚರ್ಚೆ:**

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ರಾಯಚೂರಿನ ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯದಲ್ಲಿ 2026–27ನೇ ಶೈಕ್ಷಣಿಕ ಸಾಲಿನಿಂದ BCA, MCA, MBA ಹಾಗೂ Master of hotel Management and Catering(MHMC) ಈ ಹೊಸ ಕೋರ್ಸುಗಳನ್ನು ಪ್ರಾರಂಭಿಸಲು AICTE New Delhi ಇವರು ಅನುಮೋದನೆ ನೀಡಿರುತ್ತಾರೆ ಮತ್ತು ಪ್ರತಿ ಕೋರ್ಸಿಗೆ 60 ಪ್ರವೇಶಾತಿ ಮಿತಿ ಎಂದು ತಿಳಿಸಿರುತ್ತಾರೆ. ವಿಶ್ವವಿದ್ಯಾಲಯಕ್ಕೆ ಅಗತ್ಯವಾಗಿರುವ ಮೂಲಭೂತ ಸೌಕರ್ಯ, ಹುದ್ದೆಗಳು, ಆರ್ಥಿಕ ವೆಚ್ಚ, ಕೋರ್ಸುಗಳ ಅಗತ್ಯತೆ ಇತ್ಯಾದಿ ಅವಶ್ಯಕ ಅಂಶಗಳೊಂದಿಗೆ ನಿಯಮಾನುಸಾರ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ, 2000ರ ಪ್ರಕರಣ 44ರನ್ವಯ ವಿಶ್ವವಿದ್ಯಾಲಯದ ಸಕ್ಷಮ ಪ್ರಾಧಿಕಾರಿಗಳ ಅನುಮೋದನೆಯೊಂದಿಗೆ ವಿನಿಯಮವನ್ನು ರಚಿಸಿಕೊಂಡು ಸರ್ಕಾರಕ್ಕೆ ಸಲ್ಲಿಸಿದ್ದಲ್ಲಿ, ನಿಯಮಾನುಸಾರ ಪರಿಶೀಲಿಸಲಾಗುವುದು ಎಂದು ಸರ್ಕಾರವು ನಿರ್ದೇಶಿಸಿದೆ. ಸದರಿ ವಿಷಯಕ್ಕೆ ಸಂಬಂಧಿಸಿದಂತೆ ವಿಷಯವಾರು ಅಧ್ಯಯನ ಮಂಡಳಿಯ(BOS) ಹಾಗೂ Statute ಅನ್ನು ರಚಿಸಿದ್ದ ಸದರಿ Statute ಅನುಮೋದನೆಗಾಗಿ ಸರ್ಕಾರಕ್ಕೆ ಸಲ್ಲಿಸಲು ಸಭೆಗೆ ಮಂಡಿಸಿದರು. ಸಭೆಯು AICTE ಯವರು ವಿಶ್ವವಿದ್ಯಾಲಯಕ್ಕೆ BCA, MCA, MBA ಹಾಗೂ Master of hotel Management and Catering(MHMC) ಕೋರ್ಸುಗಳನ್ನು ನಡೆಸಲು ನೀಡಿರುವ ಅನುಮತಿ ಪತ್ರವನ್ನು ಪರಿಶೀಲಿಸಿ ವಿಶ್ವವಿದ್ಯಾಲಯವು ಕೈಗೊಂಡ ಕ್ರಮಕ್ಕೆ ಮೆಚ್ಚುಗೆಯನ್ನು ಸೂಚಿಸಿತು.

**ನಿರ್ಣಯ:**

ಸದರಿ ಕೋರ್ಸುಗಳ ಪ್ರಾರಂಭಕ್ಕೆ ಕೈಗೊಳ್ಳಬೇಕಾದ ಎಲ್ಲಾ ಕ್ರಮಗಳನ್ನು ಅನುಸರಿಸಲು ಸಭೆಯು ಒಪ್ಪಿಗೆ ಸೂಚಿಸಿ ಅನುಮೋದಿಸಿತು.

**ವಿಷಯ ಕ್ರಮಾಂಕ (5) :**

ಅಧ್ಯಕ್ಷರ ಅನುಮತಿಯ ಮೇರೆಗೆ ಇತರೆ ವಿಷಯಗಳ ಕುರಿತು ಚರ್ಚೆ.

1. 2026–27 ನೇ ಶೈಕ್ಷಣಿಕ ಸಾಲಿನ ಸ್ನಾತಕ ಪದವಿಯ ಎರಡನೇ, ನಾಲ್ಕನೇ ಹಾಗೂ ಆರನೇ ಸೆಮಿಸ್ಟರ್ ಪರೀಕ್ಷೆಗಳನ್ನು ಮುಂದೂಡಿದ ಕುರಿತು.

   **ನಿರ್ಣಯ:**

   2026–27 ನೇ ಶೈಕ್ಷಣಿಕ ಸಾಲಿನ ಸ್ನಾತಕ ಪದವಿಯ ಎರಡನೇ, ನಾಲ್ಕನೇ ಹಾಗೂ ಆರನೇ ಸೆಮಿಸ್ಟರ್‌ನ ಪರೀಕ್ಷೆಗಳನ್ನು ಮಾನ್ಯ ಕುಲಪತಿಗಳ ನಿರ್ದೇಶನದಂತೆ ಹಾಗೂ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಅವರಿಂದ ಮುಷ್ಕರ ಅಯೋಜಿಸುವ ಪ್ರಯುಕ್ತ ಬಸ್ಸಿನ ವ್ಯವಸ್ಥೆ ಇಲ್ಲದ ಕಾರಣ ಹಾಗೂ ಬೇಸಿಗೆಯ ತಾಪಮಾನ ಹೆಚ್ಚುಗಿರುವುದರಿಂದ ದಿನಾಂಕ 20.05.2026 ರಂದು ನಡೆಯಬೇಕಾಗಿದ್ದ ಪರೀಕ್ಷೆಗಳನ್ನು ದಿನಾಂಕ 25.05.2026 ರಿಂದ ಪ್ರಾರಂಭಿಸಲು ನಿರ್ಧಾರಿಸಲಾಯಿತು.

2. ವಿದ್ಯಾರ್ಥಿಗಳಿಗೆ ಚಿನ್ನದ ಪದಕ ನೀಡುವ ಕುರಿತು.

   ಚಿನ್ನದ ಪದಕದ ಸಮಿತಿಯ ಸದಸ್ಯರುಗಳು ಸಭೆ ಸೇರಿ ರಾಯಚೂರು ಹಾಗೂ ಯಾದಗಿರಿ ಜಿಲ್ಲೆಯಲ್ಲಿರುವ ಗಣ್ಯ ವ್ಯಕ್ತಿಗಳನ್ನು ಭೇಟಿ ಮಾಡಿ ಕನಿಷ್ಠ ಪಕ್ಷ 50 ಚಿನ್ನದ ಪದಕಗಳ ದೇಣಿಗೆ ಸಂಗ್ರಹ ಮಾಡುವಂತೆ ಸಭೆಯ ಸದಸ್ಯರಾದ ಶ್ರೀ ಥಾಮಸ್ ಬೇಂಜಮಿನ್ ಹಾಗೂ ಶ್ರೀ ಸತ್ಯನಾರಾಯಣ ಶ್ರೇಷ್ಠಿ ತಿಳಿಸಿದರು.

   **ನಿರ್ಣಯ:**

   ಎಲ್ಲಾ ವಿದ್ಯಾವಿಷಯಕ ಪರಿಷತ್ ಸದಸ್ಯರು ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ದೇಣಿಗೆ ಸಂಗ್ರಹಿಸಲು ಒಪ್ಪಿಗೆ ಸಲ್ಲಿಸಿದರು.

3. ಪಿಹೆಚ್.ಡಿ ಪದವಿ ನೊಂದಣಿ ಕುರಿತು.

ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯದಲ್ಲಿ No.ASMVUR/ ACA/ Ph.D/2025-26/764 Date:12.09.2025 Notification ಪ್ರಕಾರ ಪಿಹೆಚ್.ಡಿ ಪದವಿಗಾಗಿ ಪ್ರಥಮವಾಗಿ ಅರ್ಜಿಗಳನ್ನು ಆಹ್ವಾನಿಸಲಾಗಿತ್ತು. ಆರು ವಿಭಾಗಗಳಲ್ಲಿ 79 ಸಂಖ್ಯೆಯ ಅರ್ಜಿಗಳು ಸ್ವೀಕೃತಗೊಂಡಿದ್ದು, ಗುಲ್ಬರ್ಗಾ ವಿಶ್ವವಿದ್ಯಾಲಯದ ಪಿಹೆಚ್.ಡಿ ನಿಯಮಾವಳಿಗಳು, ಯುಜಿಸಿ ನಿಯಮಾವಳಿಗಳು ಹಾಗೂ ಡೀನರ ಸಭೆಯ ತೀರ್ಮಾನದಂತೆ ಹಾಗೂ ಸರ್ಕಾರದ ಮೀಸಲಾತಿ ನಿಯಮಗಳನ್ನು ಅಳವಡಿಸಿಕೊಂಡು 22 ಸಂಖ್ಯೆಯ ಪಿಹೆಚ್.ಡಿ ವಿದ್ಯಾರ್ಥಿಗಳನ್ನು ಪ್ರವೇಶಾತಿ ಪರೀಕ್ಷೆ ಮತ್ತು ಸಂದರ್ಶನ ನಡೆಸಿ ಆಯ್ಕೆಗೊಳಿಸಲಾಗಿರುತ್ತದೆ.

ಸದರಿ ವಿದ್ಯಾರ್ಥಿಗಳು ಪಿಹೆಚ್.ಡಿ ನೊಂದಣಿ ಹೊಂದಿರುವುದರಿಂದ ಸದರಿಯವರಿಗೆ ಸರ್ಕಾರದಿಂದ ಹಾಗೂ ವಿಶ್ವವಿದ್ಯಾಲಯದಿಂದ ಶಿಷ್ಯವೇತನ ನೀಡುವುದು, ಶೈಕ್ಷಣಿಕ ವೇಳಾಪಟ್ಟಿ ನಿಗದಿಪಡಿಸುವುದು ಹಾಗೂ ಕೆಲವು ಮಾರ್ಗಸೂಚಿಗಳನ್ನು ಅಳವಡಿಸಿಕೊಳ್ಳುವ ಕುರಿತು ಸಭೆಗೆ ಅನುಮೋದನೆಗಾಗಿ ಕೋರಲಾಯಿತು.

**ನಿರ್ಣಯ:**

ಸದರಿ ವಿಷಯದ ಕುರಿತು ವಿದ್ಯಾವಿಷಯಕ ಪರಿಷತ್ ಸದಸ್ಯರು ಚರ್ಚಿಸಿ ವಿಶ್ವವಿದ್ಯಾಲಯದ ನಿಯಮಗಳು ಹಾಗೂ ಶಿಷ್ಯವೇತನಕ್ಕೆ ಸಂಬಂಧಿಸಿದಂತೆ ಸರ್ಕಾರದ ನಿಯಮಗಳಿಗೆ ಅನುಗುಣವಾಗಿ ಕ್ರಮವಹಿಸಲು ಕುಲಪತಿಗಳಿಗೆ ಅಧಿಕಾರವಹಿಸಿ ಸಭೆಯು ಒಪ್ಪಿಗೆ ಸೂಚಿಸಿ ಅನುಮೋದಿಸಿತು.

ಸಭೆಯ ಕೊನೆಯಲ್ಲಿ ಕುಲಸಚಿವರು ಮಾನ್ಯ ಕುಲಪತಿಗಳಿಗೆ, ಉಪಸ್ಥಿತರಿದ್ದ ಎಲ್ಲಾ ಸದಸ್ಯರಿಗೆ ಹಾಗೂ ಅಧಿಕಾರಿಗಳಿಗೆ ವಂದಿಸುತ್ತಾ ಸಭೆಯನ್ನು ಮುಕ್ತಾಯಗೊಳಿಸಿದರು.

20/5/26

**ಡಾ. ಎ. ಚನ್ನಪ್ಪ., ಕೆ.ಎ.ಎಸ್.**
ಕುಲಸಚಿವರು ಹಾಗೂ ಸದಸ್ಯಕಾರ್ಯದರ್ಶಿಗಳು
ಕುಲಸಚಿವರು
ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯ
ರಾಯಚೂರು

20/05/26.

**ಪ್ರೊ. ಶಿವಾನಂದ ಕೆಳಗಿನಮನಿ**
ಕುಲಪತಿಗಳು ಹಾಗೂ ಅಧ್ಯಕ್ಷರು
ಕುಲಪತಿಗಳು
ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯ
ರಾಯಚೂರು